ಪಶ್ಚಿಮ ಘಟ್ಟ ಅಭಿವೃದ್ಧಿ ಕುರಿತು

2894 - ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಡಿಕೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಶ್ಚಿಮ ಘಟ್ಟ ಪ್ರದೇಶಗಳೆಷ್ಟು?*

ಆ) *ಇದರ ಅಭಿವೃದ್ಧಿಗೆ ಪಶ್ಚಿಮ ಘಟ್ಟ ಅಭಿವೃದ್ಧಿ ಮಂಡಳಿಯಿಂದ ಬಿಡುಗಡೆಗೊಂಡಿರುವ ಹಣ ಎಷ್ಟು?*

ಇ) *ಇದೇ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಡಿಕೇರಿ ವಿಧಾನ ಸಭಾ ಕ್ಷೇತ್ರಕ್ಕೆ ವಿನಿಯೋಗಿಸಲಾಗಿರುವ ಮೊತ್ತ ವೆಷ್ಟು?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ಸುಮಾರು 60,000 ಹೆಕ್ಟೇರ್.

ಆ) ಮಡಿಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಗೆ ಬಿಡುಗಡೆ ಮಾಡಿರುವ ಹಣದ ವಿವರಗಳು ಈ ಕೆಳಕಂಡಂತೆ.

ವರ್ಷ	*ಬಿಡುಗಡೆ ಮಾಡಿದ ಹಣ (ರೂ. ಲಕ್ಷಗಳಲ್ಲಿ)*
1994-95	ರೂ. 19.406 ಲಕ್ಷ
1995-96	ರೂ. 17.194 ಲಕ್ಷ
1996-97	ರೂ. 19.785 ಲಕ್ಷ

ಇ) ಮಡಿಕೇರಿ ವಿಧಾನ ಸಭಾ ಕ್ಷೇತ್ರದ ಪಶ್ಚಿಮ ಘಟ್ಟ ಪ್ರದೇಶ ಅಭಿವೃದ್ಧಿ ಯೋಜನೆಗೆ ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಯು ವಿನಿಯೋಗಿಸಿದ ಮೊತ್ತವು ಈ ಕೆಳಕಂಡಂತಿದೆ.

1994-95	ರೂ. 18.017 ಲಕ್ಷ
1995-96	ರೂ. 19.942 ಲಕ್ಷ
1996-97	ರೂ. 18.842 ಲಕ್ಷ

ಕೊಡಗು ಜಿಲ್ಲೆಯಲ್ಲಿ ಕಾಡಾನೆ ತುಳಿತಕ್ಕೆ ಒಳಗಾದವರಿಗೆ ಪರಿಹಾರ

2895 - ಶ್ರೀ ಡಿ. ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *1996-97ನೇ ಮತ್ತು 1997-98ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ತುಳಿತಕ್ಕೆ ಸಿಕ್ಕಿ ಸತ್ತವರ ಮತ್ತು ಗಾಯಗೊಂಡವರ ಸಂಖ್ಯೆ ಎಷ್ಟು?*

2) *ಸತ್ತವರ ಮತ್ತು ಗಾಯಗೊಂಡವರ ಕುಟುಂಬಗಳಿಗೆ ಸರ್ಕಾರ ಪರಿಹಾರಧನವನ್ನು ಬಿಡುಗಡೆ ಮಾಡಿದೆಯೇ?*

3) *ಪರಿಹಾರ ಕಲ್ಪಿಸಲಾಗಿದ್ದಲ್ಲಿ ಪರಿಹಾರ ಧನದ ಮೊತ್ತವೆಷ್ಟು? (ವಿವರ ನೀಡುವುದು)*